11/18 — ೧೦—

# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.

ಸಿಸಿ ನಂ.723/2017

ಫಿರ್ಯಾದಿ: ಕರ್ನಾಟಕ ಸರಕಾರ ಪರ: ಅಬಕಾರಿ ಪೊಲೀಸರು ಸೇಡಂ.

-:: ವಿರುದ್ಧ ::-

ಆರೋಪಿ ನಂ.1) ನರಸಿಂಹಲು ತಂದೆ ಸಾಬಯ್ಯ ಕಲಾಲ,
ವ: 65 ವರ್ಷ, ಉ: ಕೂಲಿ ಕೆಲಸ,
ಸಾ: ಇಟಕಾಲ ಗ್ರಾಮ, ತಾ: ಸೇಡಂ.
2) ರಾಜಶೇಖರ ರೆಡ್ಡಿ ತಂದೆ ಮಲ್ಲಣಗೌಡ,
ವ: 65 ವರ್ಷ, ಉ: ಒಕ್ಕಲುತನ,
ಸಾ: ಕೊಲಕುಂದಾ ಗ್ರಾಮ, ತಾ: ಸೇಡಂ.

----

## ದೋಷಾರೋಪಣೆ

ನಾನು ಶ್ರೀ ಸುನೀಲ್.ಎಸ್.ತಳವಾರ, ಬಿ.ಎ. ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

1 ನೇ ಆರೋಪಿತನಾದ ನೀನು ದಿನಾಂಕ 24.07.2017 ರಂದು ಬೆಳಿಗ್ಗೆ 10.00 ಗಂಟೆ ಸುಮಾರಿಗೆ ಸೇಡಂ ಅಬಕಾರಿ ಪೊಲೀಸ್ ಠಾಣಾ ಹದ್ದಿಯಲ್ಲಿರುವ ಕಾನಕುರ್ತಿ-ಇಟಕಾಲ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ 2 ನೇ ಆರೋಪಿತನ ಮಾಲೀಕತ್ವದ ಮೋಟಾರ್ ಸೈಕಲ್ ನಂ.ಕೆಎ-32/ಎಲ್-6309 ನೇದ್ದರ ಮೇಲೆ ತೆಲಂಗಾಣ ರಾಜ್ಯದಿಂದ ಒಟ್ಟು 20 ಲೀಟರ್ ಕಲಬೆರಕೆ ಸೇಂದಿಯನ್ನು ಅಕ್ರಮವಾಗಿ ಯಾವುದೇ ಪರವಾನಿಗೆ ಇಲ್ಲದೇ ಸಾರ್ವಜನಿಕರಿಗೆ ಮಾರಾಟ ಮಾಡಲು ಸಾಗಾಟ ಮಾಡುತ್ತಿದ್ದಾಗ, ಚಾಸಾ-3 ರಿಂದ 5, 7, 8 ನೇದ್ದವರು ಕೂಡಿಕೊಂಡು, ಚಾಸಾ.1 ಮತ್ತು 2 ನೇದ್ದವರ ಸಮಕ್ಷಮದಲ್ಲಿ ದಾಳಿ ಮಾಡಿ ನಿನ್ನ ವಶದಲ್ಲಿದ್ದ ಕಲಬೆರಕೆ ಸೇಂದಿ ವಶಪಡಿಸಿಕೊಂಡಿದ್ದು, ಅಲ್ಲದೇ ಸದರಿ ಕಲಬೆರಕೆ ಸೇಂದಿ ಸೇವನೆಯಿಂದ ಮಾನವ ಜೀವಕ್ಕೆ ಹಾನಿಯಾಗುತ್ತದೆಂದು ಗೊತ್ತಿದ್ದರೂ ಸಹ ಕಲಬೆರಕೆ ಸೇಂದಿ ಮಾರಾಟ ಮಾಡಲು ಸಾಗಾಟ ಮಾಡಿದ್ದರಿಂದ, ಕಾರಣ ನೀನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 34 ಹಾಗೂ ಭಾ.ದಂ.ಸಂ. 273 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

27/02/23

ದಿನಾಂಕ: 27-02-2023 ಪ್ರ.ದ.ನ್ಯಾದಂ. ಸೇಡಂ.

Advocate